ಮಾಯವ್ವ ತಮ್ಮ ಹೊಲಮನೆಗೆ ಸಂಚಕಾರ ತಂದುಗಿಂದಾಳೆಂದು ಅವರು ಹೆದರಿದರು.

ಮಾಯಿಯ ತವರು ಮನೆಯವರನ್ನು ಕರೆಸಿದರು. ಎಲ್ಲರೆದುರು ಆಕೆಯ ಮಾಂಗಲ್ಯ ಬಿಚ್ಚಿಸಿಕೊಂಡು ಈ ಮದುವೆ ರದ್ದಾಗಿದೆ ಎನ್ನುವ ರೀತಿಯಲ್ಲಿ ಬರೆಸಿ ಎಲ್ಲರೂ ಸಹಿ ಮಾಡಿದರು. ಹಾಗೆ ಸಹಿ ಮಾಡುವಾಗ ಮಾಯಿಯ ಮುಖ ಇಷ್ಟಗಲವಾಗಿತ್ತು. ಆ ದಿನ ತವರುಮನೆಗೆ ಹೋಗಿ ಮಾಯಿ ಹಾಲು ಕುಡಿದಳಂತೆ!

'ಕೊಳ್ಳಾಗಿನ ತಾಳಿ ಹರಿದುಹೋದ್ರ ಹೆಂಗಸರು ಅಳತಾರ. ಆದ್ರ ಈಕಿನ್ನ ನೋಡ್ರೆ ಯವ್ವಾ, ಹಾಲ ಕುಡ್ಯಾಕಹತ್ತ್ಯಾಳ. ಮಕಾ ನೋಡ ಹೆಂಗ ಅಳ್ಳೀತಿ. ಒಟ್ಟಿನ್ಯಾಗ ಗಂಡ ಬ್ಯಾಡ ಆಗಿದ್ನಂತ ಕಾಣ್ತದ. ಯಾವ ಗೆಣ್ಯಾನ ಗೇಣಿಕೆ ಹಾಕಲಿಕ್ಕೆ ಹತ್ಯಾಳೊ ಯಾರಿಗ್ಗೊತ್ತು?' ಜನರ ಮಾತಿಗೆ ಆಕೆಯ ಮನೆಯವರು ನೊಂದುಕೊಂಡರೂ ಮಾಯಿ ಮಾತ್ರ ನೊಂದುಕೊಳ್ಳಲಿಲ್ಲ. ಅದಕ್ಕೆ ತಲೆಕೆಡಿಸಿಕೊಳ್ಳದೆ 'ಗಿಡದ ಹೂವು ಗಿಡದ ಸುತ್ತು ಬೀಳ್ತಾವ. ಬೈದವರು ಬಂಧುಗಳು' ಎಂದು ಸುಮ್ಮನಾದಳು. ಕಟೆದ ಗೊಂಬೆಯಂತಿದ್ದ ಮಗಳು ಮನೆಯಲ್ಲಿ ಕೂಡುವಂತಾಯಿತಲ್ಲ ಎಂದು ಅವ್ವ ಅಪ್ಪ ಕೆಲವು ದಿನ ಕಣ್ಣೀರಿನಲ್ಲಿ ಕೈತೊಳೆದರು. ಆದರೆ ಮಾಯಕ್ಕ ಊರಲ್ಲಿ ದುಡಿಯಲು ತೊಡಗಿ ಆರ್ಥಿಕವಾಗಿ ಅವರಿಗೆ ನೆರವಾದಾಗ ಅವರೂ ಸಮಾಧಾನಪಟ್ಟರು. ಮಗಳು ನಗುನಗುತ್ತ ಸುಖವಾಗಿದ್ದಾಳಲ್ಲ ಎಂದು ಸಂತೋಷಪಟ್ಟರು ಮುಂದೆ ಒಂದೆರಡು ವರ್ಷವಾಗಿರಬೇಕು. ಸುಖದ ದಿನಗಳ ನಡುವೆ ದುಃಖದ ದಿನಗಳು ಬಂದೇ ಬರುತ್ತವೆ ಎನ್ನುವಂತೆ ಮಾಯಕ್ಕ ಒಂದು ದಿನ ಅವ್ವನ ಮುಂದೆ ಒಂದು ಸುದ್ದಿ ಹೇಳಿದಾಗ ಅವ್ವ ಬವಳಿ ಬಿದ್ದಳು. ಆಕೆ ದೇವಪ್ಪನನ್ನು ಇಷ್ಟಪಟ್ಟು ಅವನೊಂದಿಗೆ ಮದುವೆಯಾದ ಸುದ್ದಿ ಕೇಳಿದಾಗ ಇಡೀ ಎಕ್ಕೇರಿ ಊರು ಆಘಾತದಲ್ಲಿ ಮುಳುಗಿತು!

***

ಎಕ್ಕೇರಿಗೆ ಸಮೀಪವಿರುವ ಕಲ್ಲೂರಿನ ಬಸವಣ್ಣನ ಗುಡಿಯಲ್ಲಿ ಅಂದು ಎಂದೂ ಇಲ್ಲದ ಸಂಭ್ರಮವಿದ್ದಂತಿತ್ತು. ಇಂದು ಸೋಮವಾರವೇನೋ ಹೌದು. ಪ್ರತಿ ಸೋಮವಾರ ಇಲ್ಲದ ಜನರ ಗದ್ದಲ ಇಂದೇಕಿದೆ? ಜಾತ್ರೆ, ಉತ್ಸವ, ಪ್ರವಚನ ಅಂತಹದ್ದೇನೂ ಇಲ್ಲವಲ್ಲ? ಕೆಲವರು ಸಂತೋಷದಿಂದ ಆ ಕಡೆಯಿಂದ ಈ ಕಡೆ, ಈ ಕಡೆಯಿಂದ ಆ ಕಡೆ ಓಡಾಡುತ್ತಿರುವುದೇಕೆ? ನಸುಕಿನಲ್ಲಿಯೆ ಹತ್ತಿಪ್ಪತ್ತು ಜನರಿರುವ ಒಂದು ಟೆಂಪೊ ಗಾಡಿ ಗುಡಿಯ ಆವರಣಕ್ಕೆ ಬಂದಂತಿತ್ತು. ಕಲ್ಲೂರಿಗೆ ಸಮೀಪವಿರುವ ಗುಡಿಹಾಳದಲ್ಲಿ ನಿನ್ನೆ ನಾಟಕ ಇತ್ತು. ಬಹುಶಃ ಆ ನಾಟಕ ನೋಡಲು ಬಂದವರಿರಬೇಕು. ನಾಟಕ ಮುಗಿಯಲಿಕ್ಕೆ ಬೆಳಕಾಗಿರಬೇಕು. ಬಸವಣ್ಣನ ದರ್ಶನ ಮಾಡಿಕೊಂಡು ಹೋಗುತ್ತಿರಬೇಕು. ಜನರ ಕುತೂಹಲಕ್ಕೆ ಕೊನೆಯೇ ಇರುವುದಿಲ್ಲ. ಎಲ್ಲಿಯಾದರೂ ಜನ ಬರದಿದ್ದರೆ ಜನ ಯಾಕೆ ಬಂದಿಲ್ಲವೆನ್ನುವುದು, ಜನ ಬಂದರೆ ಯಾಕೆ ಬಂದಿದ್ದಾರೆನ್ನುವುದು ಮಜವಾಗಿರುತ್ತದೆ! ಅಲ್ಲಿ ಕೂಡಿರುವ, ಸಂಭ್ರಮಪಡುತ್ತಿರುವ ಜನರು ಯಾವ ಊರಿನವರೆಂಬುದು ಹೊಳೆಯುತ್ತಿಲ್ಲ. ಇರಲಿ ಬಿಡಿ, ಅವರ ಸುದ್ದಿ ತಮಗೇಕೆ ಎಂದು ಗುಡಿಯೆದುರಿನ ಕಟ್ಟೆಯ ಮೇಲೆ, ಹತ್ತಿರದ ಮರಗಿಡಗಳ ಬೊಡ್ಡೆಗೆ ಕುಳಿತು ಹರಟೆ ಹೊಡೆಯುತ್ತಿದ್ದವರು ಅಂದುಕೊಂಡರು. ಅವರು ಅಷ್ಟು ಅಂದುಕೊಂಡರೂ ಅವರ ಮನಸ್ಸಿನಲ್ಲಿ ಒಂದೇ ಸಮನೆ ಏಳುತ್ತಿದ್ದ ಕೌತುಕವನ್ನು ತಡೆಯದಾದರು. ಏನು ನಡೆಯುತ್ತಿದೆ, ನೋಡಿಯೇ ಬಿಡೋಣ ಎಂದು ಗುಡಿಗೆ ಬಂದರು. ಅಷ್ಟೊತ್ತಿಗೆ ಒಬ್ಬ ಸ್ವಾಮಿಗಳು ಏನೋ ಮಂತ್ರ ಹೇಳುತ್ತಿದ್ದುದು ಕೇಳಿಸಿತು. ಹತ್ತಿರ ಬರುತ್ತಿದ್ದಂತೆ ಇದು ಮದುವೆಯಲ್ಲಿ ಹೇಳುವ ಮಂತ್ರ ಎನ್ನುವುದರಲ್ಲಿ ಸಂಶಯ ಉಳಿಯಲಿಲ್ಲ.

'ಮಾಂಗಲ್ಯಂ ತಂತು ನಾನೇನ ಮಮಜೀವನ ಹೇತುನಾ, ಕಂಠೇ ಬದ್ನಾಮಿ ಸುಭಗೇ ತ್ವಂ ಜೀವಶರದಶ್ಶತಮ್' ಎನ್ನುವುದು ಕೇಳಿಸಿದಾಗ ಓಹ್, ಇಲ್ಲಿ ಮದುವೆ ನಡೆಯುತ್ತಿದೆಯೆಂದು ಲಗುಬಗೆಯಲ್ಲಿ ಹೆಜ್ಜೆಯಿಟ್ಟು ಅಲ್ಲಿಗೆ ಬರುವುದಕ್ಕೂ ಸೇರಿದ್ದ ಆಪ್ತರು ವಧುವರರಿಗೆ ಅಕ್ಷತೆ ಒಗೆಯುವುದಕ್ಕೂ ಸರಿಹೋಯಿತು. ದೇವಪ್ಪನನ್ನು ಮದುವೆಯಾಗಲೇಬೇಕೆನ್ನುವ ಉತ್ಕಟ ಅಭಿಲಾಷೆ ತನ್ನಲ್ಲಿ ಎಷ್ಟೊಂದು ಇತ್ತಲ್ಲ? ಅವನಿಗೆ ಯಾರಾದರೂ ವ್ಯಂಗ್ಯ ಮಾಡಿದರೆ, ಅವಹೇಳನ ಮಾಡಿದರೆ ತಾನು ಸಿಟ್ಟಿನಿಂದ ಸಿಡಿಯುತ್ತಿದ್ದೆ. ತನ್ನ ಸೂಕ್ಷ್ಮ ಭಾವನೆಗಳಿಗೆ ಆತ ಎಷ್ಟೊಂದು ನವಿರಾಗಿ ಪ್ರತಿಸ್ಪಂದಿಸಿದ. ರಮ್ಯ ಹಾಗೂ ವಿಲಕ್ಷಣವೆನಿಸುವ ಪ್ರೇಮಲೋಕವೊಂದನ್ನು ದೇವಪ್ಪ ತನ್ನಲ್ಲಿ ತೆರೆದಿಟ್ಟ. ಅವನ ಅಡುಗೆ ತಂಡದಲ್ಲಿ ಸಹಾಯಕಳೆಂದು ಮಾಯಕ್ಕ ಹೋಗುವುದು ಅನೇಕರಿಗೆ ಗೊತ್ತಿತ್ತು. ಆಕೆ ಲಟ್ಟಿಸುವ ಚಪಾತಿ, ತಟ್ಟುವ ರೊಟ್ಟಿಯ ರುಚಿ ಊರಿಗೆ ಗೊತ್ತಿತ್ತು. ಮುತ್ತಪ್ಪನನ್ನು ತೊರೆದ ಮೇಲೆ ಅವಳಿಗೆ ನೆಮ್ಮದಿ ನೀಡುವ ಕಾಯಕದಲ್ಲಿ ನಿರತಳಾಗಿದ್ದಾಳೆ, ಪಾಪ ಎಂದು ಅವಳ ಬಗ್ಗೆ ಎಲ್ಲರೂ ಅನುಕಂಪ ಸೂಸುವವರೆ. ಅವಳ ಮದುವೆಯ ಬಗ್ಗೆ ಯಾರೂ ಆಲೋಚನೆ ಸಹ ಮಾಡಿರಲಿಲ್ಲ. ಆದರೆ ಯಾವಾಗ ಆಕೆ ದೇವಪ್ಪನನ್ನು ವರಿಸಿ ತನ್ನೂರು ತೊರೆದು ಹೋದಳೋ, ಆವಾಗ ಮಂದಿಗೆ ಮಾಯಕ್ಕಳ ನೆನಪಾಯಿತು. ಇಷ್ಟು ದಿನ ಸುಮ್ಮನಿದ್ದವರು ಈಗ ಒಮ್ಮಿಂದೊಮ್ಮೆಲೆ ಅವಳ ಹಿತಚಿಂತನೆ ನಡೆಸಿದರು. ದೇವಪ್ಪ ಏನೋ ಮಾಟಮಂತ್ರ ಮಾಡಿ ಅವಳನ್ನು ಕರೆದೊಯ್ದಿದ್ದಾನೆ ಎಂದು ಮಾತಾಡಿಕೊಂಡರು. ದೇವಪ್ಪನಿಗೆ ಸರಿಯಾದ ಪಾಠ ಕಲಿಸಿ ಅವಳನ್ನು ಮರಳಿ ಕರೆದುಕೊಂಡು ಬರಬೇಕು, ಇದು ಊರಿನ ಸ್ವಾಭಿಮಾನದ ಪ್ರಶ್ನೆ ಎಂದರು.

'ಮದುವಿಯಾಗೋದು ಅವಳ ವೈಯಕ್ತಿಕ ವಿಚಾರ. ಅದನ್ಯಾಕ ಸಾರ್ವಜನಿಕ ಸಂಗತಿ ಮಾಡ್ತಾ ಇದೀರಿ' ಹಿರಿಯರೊಬ್ಬರು ಬುದ್ಧಿವಾದ ಹೇಳಿದ ಕೂಡಲೆ ಒಂದು ಗುಂಪು ಅಷ್ಟಕ್ಕೇ ಸುಮ್ಮನಾಯಿತು. ಮಾಯಕ್ಕನ ಮದುವೆ ವಿಚಾರ ಎಕ್ಕೇರಿಯಲ್ಲಿ ಅಷ್ಟೇ ಅಲ್ಲದೆ ಮಲ್ಲೂರಿನಲ್ಲಿಯೂ ದಿಗ್ಭ್ರಮೆ ಹುಟ್ಟಿಸಿತ್ತು. ಇಂತಹ ಸುದ್ದಿಯೊಂದನ್ನು ಒಂದು ದಿನ ತಾವು ಕೇಳಬಹುದಾಗುತ್ತದೆಯೆಂದು ಅವರು ಕನಸಿನಲ್ಲಿಯೂ ನಿರೀಕ್ಷೆ ಮಾಡಿರಲಿಲ್ಲ. ಅದು ಯಾಕೆ ಅನಿರೀಕ್ಷಿತವೆಂದರೆ ದೇವಪ್ಪ ಮಧ್ಯವಯಸ್ಕನಾಗಿದ್ದವನು, ಮದುವೆಯಾಗಿ ಮಕ್ಕಳಿರುವವನು. ಅವನ ಹೆಂಡತಿ ಅನುಸೂಯ ಮಕ್ಕಳೊಂದಿಗೆ ಅವನನ್ನು ಬಿಟ್ಟುಹೋಗಿ ಆಗಲೇ ಎರಡು ಮೂರು ವರ್ಷಗಳಾಗಿದ್ದವು. ಇಂತಹ ಕಪ್ಪುಚರಿತ್ರೆ ಹೊಂದಿರುವ ಅವನನ್ನು ಮಾಯಕ್ಕಳಂತಹ ಚೆಲುವೆ ವರಿಸುತ್ತಾಳೆಂದರೇನು? ಹಾಗೆ ನೋಡಿದರೆ ದೇವಪ್ಪ ಒಳ್ಳೆಯವನೇನೋ ಹೌದು. ತನ್ನಷ್ಟಕ್ಕೆ ತಾನು ಇರುತ್ತಾನೆ. ಇಲ್ಲದ ಉಸಾಬರಿಗೆ ಹೋಗುವುದಿಲ್ಲ. ಅವನ ವೈಯಕ್ತಿಕ ವಿಚಾರ ತಮಗೇಕೆ? ಈ ಊರಲ್ಲಿ ಆತ ಎಷ್ಟೆಲ್ಲ ಕಾರ್ಯಕ್ರಮಗಳಲ್ಲಿ ಅಡುಗೆ ಮಾಡಿ ಊರವರ ಶಹಭಾಸಗಿರಿ ಪಡೆದಿಲ್ಲ? ಈಗ ನೋಡಿದರೆ ಆತನಲ್ಲಿ ಇಂತಹ ಕಾರಸ್ಥಾನ ಇತ್ತೆ ಎಂದು ಅವಡುಗಚ್ಚಿದರು.

ಮಾಯಕ್ಕಳಂತಹ ರೂಪವತಿಯ ಗಂಡನ ಸ್ಥಾನದಲ್ಲಿ ದೇವಪ್ಪನನ್ನು ಕಲ್ಪಿಸಿಕೊಳ್ಳುವುದು ಬಹಳ ಮಂದಿಗೆ ಕಷ್ಟವಾಯಿತು. ಮಾಯಿಯ ಅವ್ವನಂತೂ ಓಣಿಯಲ್ಲಿ ಹಾಡಿಕೊಂಡು ಅಳತೊಡಗಿದಳು. ಮಗಳು ಮನೆಯ ಮರ್ಯಾದೆ ತೆಗೆದಳೆಂದು ಎಲ್ಲ ಸಂಬಂಧಿಕರೆದುರು ಅವ್ವ, ಅಪ್ಪ, ಅಣ್ಣ, ತಮ್ಮ ರೋದಿಸಿದರು. ತನ್ನ ತವರುಮನೆಗೆ ತಾನಿನ್ನು ಹೇಗೆ ಮುಖ ತೋರಿಸಲೆಂದು ನಾಕೈದು ದಿನ ಊಟ ಬಿಟ್ಟಳು. ಊರವರು ಬಂದು 'ಆಕಿ ಹೀಂಗ ಮಾಡಲಿಕ್ಕೆ ನೀವೇ ಕಾರಣ. ಹಿಂದೆ ಮುತ್ತಪ್ಪನ ಮನಿಯೊಳಗೆ ಬಿಟ್ಟಿದ್ರ ಆಕೆ ಅಲ್ಲೇ ನೆಟ್ಟಗಿರತಿದ್ಲು. ಬೇಕಂದ್ರ ಇರತಿದ್ಲು ಇಲ್ಲಾ ಅಲ್ಲೇ ಸಾಯತಿದ್ಲು' ಎಂದು ಇವರನ್ನೇ ದೂರತೊಡಗಿದರು. ಮದುವೆಯಾದ ಕೂಡಲೇ ದೇವಪ್ಪ ಮಾಯಕ್ಕನನ್ನು ಕರೆದುಕೊಂಡು ಮಲ್ಲೂರಿಗೆ ಹೊರಟುಹೋದನಂತೆ.

ಮಾಯಕ್ಕ ತಮ್ಮ ಕೈಗೆ ಸಿಕ್ಕಿದ್ದರೆ ಅವಳನ್ನು ಎಳೆದುಕೊಂಡು ಬಂದು ಬೆಂಕಿ ಹಚ್ಚುತ್ತಿದ್ದೆವು ಎಂದು ಆಕೆಯ ಅಣ್ಣ ತಮ್ಮ ರೋಷ ವ್ಯಕ್ತಪಡಿಸಿದರು. ಮನಸ್ಸಿದ್ದೋ, ಮನಸ್ಸಿಲ್ಲದೆಯೋ ಮಾಯಿಯ ತವರುಮನೆಯವರು ಸಂಬಂಧಿಕರ ಮನೆಗಳಿಗೆ ಹೋಗಿ ತಮ್ಮ ದುಃಖ ತೋಡಿಕೊಂಡರು. ಊರವರ ಒತ್ತಾಯದ ಮೇರೆಗೆ ಕೆಲವು ಹಿರಿಯರನ್ನು ಕರೆದುಕೊಂಡು ಮಲ್ಲೂರಿಗೆ ಹೋದರು. ತಮಗೆ ಬರುತ್ತಿರುವ ಕೋಪಕ್ಕೆ ದೇವಪ್ಪ ಬೂದಿಯಾಗಬೇಕೆಂದು ಹಲ್ಲು ಮಸೆಯುತ್ತ ಗಾಡಿ ಇಳಿದರು. ಆದರೆ ಹೊಟೇಲು ಅವರನ್ನು ಶಾಂತಚಿತ್ತದಿಂದ ಸ್ವಾಗತಿಸಿತು. ಬಾಗಿಲಲ್ಲಿ ಜನ ಕಾಣಲಿಲ್ಲ. ಹೊಟೇಲು ಎಂಟು ದಿನಗಳಿಂದ ಮುಚ್ಚಿದೆ ಎನ್ನುವ ವರ್ತಮಾನ ಸಿಕ್ಕಿತು. ಊರಲ್ಲಿ, ಸುತ್ತಮುತ್ತಲ ಹಳ್ಳಿಗಳಲ್ಲಿ ವಿಚಾರಿಸಿದರು. ಅವರು ಇದ್ದಿರಬಹುದಾದ ತಾಣಗಳನ್ನು ಹುಡುಕಾಡಿದರು.

